ನಾರಾಯಣ ಮಾವನಿಗೆ ಬ್ರೈನ್ ಹೆಮರೇಜಾಯಿತೆಂಬ ಸುದ್ದಿ ಕೇಳಿ ನಾನು ಬೆಚ್ಚಿಬಿದ್ದೆ. ಕಳೆದ ಮೂರು ವರ್ಷಗಳಲ್ಲಿ ಈ ರೋಗ ನಮ್ಮ ಕುಟುಂಬದ ವ್ಯಕ್ತಿಯೊಬ್ಬನ ಮೇಲೆ ಹಸಿದ ಹುಲಿಯಂತೆ ಮುಗಿಬಿದ್ದಿರುವುದು ಇದು ಮೂರನೇ ಸಲವಾಗಿತ್ತು. ಏನು? ಏಕೆ? ಎಂದೆಲ್ಲಾ ಯೋಚಿಸುವಷ್ಟು ಸಮಯವಿರಲಿಲ್ಲ. ಫೋನಿಟ್ಟ ಇಪ್ಪತ್ತು ನಿಮಿಷಕ್ಕೆ ನನ್ನ ಬೈಕು ಶರವೇಗದಲ್ಲಿ ಶಿವಮೊಗ್ಗ ರಸ್ತೆಯಲ್ಲಿ ಓಡತೊಡಗಿತು.

ಆಗಷ್ಟೇ ಎದ್ದ ಚಂಡಮಾರುತವೊಂದು ಎದೆಯಲ್ಲಿ ಅಲ್ಲೋಲಕಲ್ಲೋಲವೆಬ್ಬಿಸುತ್ತಿತ್ತು. ವಾರದ ಕೆಳಗಷ್ಟೇ ಮನೆಗೆ ಬಂದಿದ್ದ ನಾಣಿ ಮಾವ... ಈ ಸಲ ಚೌತಿಗೆ ಬರದೇ ಹೋದ್ರೆ ನಿಂಗೆ ಗ್ರಾಚಾರ ಬಿಡಿಸ್ತೆ ಎಂದು ಮಮತೆಯ ಧಮ್ಕಿ ಹಾಕಿ ಹೋಗಿದ್ದ. ಇನ್ನೆರಡು ದಿನಗಳಲ್ಲಿ ಹೊರಟು, ಅವರ ಮನೆಯ ಬಾಗಿಲು ತಟ್ಟಬೇಕೆನ್ನುವಷ್ಟರಲ್ಲಿ ಈ ಸುದ್ದಿ ನನ್ನ ಮನೆಯ ಬಾಗಿಲು ನೂಕಿತ್ತು.

ವಾರದ ಕೆಳಗೆ ಅಂಕೋಲೆಯ ತನ್ನ ತಂಗಿಯ ಮನೆಗೆ ಹೋಗಿದ್ದ ನಾಣಿ ಮಾವನ ಹೆಂಡತಿ ಬೃಂದತ್ತೆ ಕೋವಿಡ್ ಪಾಸಿಟಿವ್ ಆಗಿ ಅಲ್ಲೇ ಕ್ವಾರೆಂಟೈನ್‌ಗೊಳಗಾಗಿದ್ದಳು. ಕೋವಿಡ್ ಗುಣವಾದರೂ ಜಿಲ್ಲೆ ಜಿಲ್ಲೆಗಳ ನಡುವಿನ ಸಂಚಾರಕ್ಕೆ ನಿರ್ಬಂಧವಿರುವ ಈ ಹೊತ್ತಿನಲ್ಲಿ ಅವಳಿಲ್ಲಿಗೆ ಬರಲಾರಳು. ನೆಟ್‌ವರ್ಕ್‌ಗಾಗಿ ಸಾಗರದಲ್ಲಿ ಗೆಳತಿಯ ಮನೆಯಲ್ಲಿದ್ದುಕೊಂಡು ವರ್ಕ್ ಫ್ರಂ ಹೋಮ್ ಮಾಡುತ್ತಿದ್ದ ಮಾವನ ಮಗಳು ಮಂದಾರ ಈಗ ಆಸ್ಪತ್ರೆಯಲ್ಲಿ ಒಬ್ಬಳೇ ಆಗಿದ್ದಾಳೆ ಎಂದುಕೊಳ್ಳುತ್ತಾ ಬೈಕಿನ ವೇಗ ಹೆಚ್ಚಿಸಿದೆ.

'ಸಂಜೀವನ ಆಸ್ಪತ್ರೆ'ಯ ಕಾರಿಡಾರು ಜನರಿಂದ ತುಂಬಿತ್ತು. 'ಎಂ.ಐ.ಸಿ.ಯು.' ಎಂದು ಬರೆದಿದ್ದ ಬೋರ್ಡಿನ ಕೆಳಗೆ ಅದರಷ್ಟೇ ನಿರ್ಭಾವುಕನಾಗಿ ಕುಳಿತ ಸೆಕ್ಯುರಿಟಿಯೊಬ್ಬ ಆಕಳಿಸುತ್ತಿದ್ದ. ಸಾಲಾಗಿದ್ದ ಕಬ್ಬಿಣದ ಕುರ್ಚಿಗಳ ಮೇಲೆ ಒಂದಷ್ಟು ಜನ ಯಾತನೆ, ನಿರ್ನಿದ್ರೆ, ಭಯಾತಂಕಗಳನ್ನೆಲ್ಲಾ ಒಟ್ಟಿಗೇ ಅನುಭವಿಸುತ್ತಾ ಕುಳಿತಿದ್ದರು. ಅವರ ಜೊತೆಗೇ ಆಸ್ಪತ್ರೆಯ ಸಿಬ್ಬಂದಿ ಯಾವುದೇ ಹೋಟೆಲ್‌ನಲ್ಲಿ ಚಹಾ ಒಯ್ಯುವ ಮಾಣಿಗಳಷ್ಟೇ ಸಲೀಸಾಗಿ ನಗುತ್ತಾ ರೋಗಿಗಳನ್ನು ಸಾಗಿಸುತ್ತಿದ್ದರು. ತುಸು ಇಣುಕಿ ನೋಡಿದಾಗ ಇವರೆಲ್ಲರ ನಡುವೆ ದುಃಖವೇ ಮೈದಾಳಿದಂತೆ ಕುಳಿತಿದ್ದ ಮಂದಾರ ನನ್ನ ಕಣ್ಣಿಗೆ ಬಿದ್ದಳು. ನನ್ನನ್ನು ನೋಡಿದೊಡನೆಯೇ ಎದ್ದೋಡಿ ಬಂದವಳ ಕನ್ನೆಯ ಮೇಲೆ ಜಲಪಾತವೊಂದು ಆಳವಾಗಿ ಹರಿದು ಹೋದ ಗುರುತಿತ್ತು.

★★★

"ಅಪ್ಪನಿಗೆ ಹೆಮರೇಜಾಗಲಿಕ್ಕೆ ಸಾಧ್ಯವೇ ಇಲ್ಲ!"

ಕಳೆದ ನಾಲ್ಕು ದಿನಗಳಲ್ಲಿ ಇದೇ ಮೊದಲ ಬಾರಿಗೆ ಮಂದಾರ ಈ ಲೋಕದವಳಂತೆ ಮಾತನಾಡಿದಳು.

"ಬಿಪಿ ಬಿಡು, ಸಣ್ಣ ಸುಸ್ತು ಅವನ ಉಸಿರಿನಲ್ಲಿ ಸುಮ್ಮನೆ ಇಣುಕಿದ್ದನ್ನು ನಾನು ಇದುವರೆಗೂ ನೋಡಿಲ್ಲ. ಅಥವಾ ಅಮ್ಮನ ಬಾಯಿಂದಲೂ ಕೇಳಿಲ್ಲ. ಮಧ್ಯಾಹ್ನವಷ್ಟೇ ಫೋನ್‌ನಲ್ಲಿ ಮಾತಾಡಿದ್ದ. ಭೂತಾಕಾರದ ಕುಂಟೆಗಳನ್ನು ತಾನೇ ಕಡಿಯುತ್ತಿರುವುದಾಗಿ ಹೇಳಿದ್ದ. ಅಂಥವನಿಗೆ ಇದ್ದಕ್ಕಿದ್ದಂತೆ ಬಿಪಿ ಹೆಚ್ಚಿ, ತಲೆಯೊಳಗಿನ ನರವೊಂದು ಒಡೆಯುತ್ತದೆಂದರೆ... ಇದರ ಹಿಂದೆ ಬೇರೇನೋ ಸಂಗತಿಯಿದೆ!"

ಹಾಗೆಂದ ಮಂದಾರಳ ಕಣ್ಣುಗಳನ್ನೇ ದಿಟ್ಟಿಸಿ ನೋಡಿದೆ. ಅಲ್ಲೀಗ ದುಃಖದ ಜಾಗದಲ್ಲಿ ತರ್ಕವೊಂದು ಮನೆ ಮಾಡಿಕೊಂಡಿತ್ತು. ಆದರೆ, ಅವಳ ಮಾತಿಗೆ ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯಲಿಲ್ಲ. ರೋಗಗಳೆಂದರೆ ಕಹಳೆ, ತುತ್ತೂರಿ ಊದಿಕೊಂಡು, ದಾಳಿಕೋರರಂತೆ ಬರುತ್ತಿದ್ದ ಕಾಲವಾಗಲೇ ಹೋಗಿದೆ. ಈಗೇನಿದ್ದರೂ ಅವುಗಳದ್ದು ಚಾಪೆ ಕೆಳಗಿನ ನೀರಿನಂತಹ ಗೌಪ್ಯ ಚಲನೆ. ಚೆನ್ನಾಗಿರುವ ವ್ಯಕ್ತಿಯೊಬ್ಬನನ್ನು ಗೊತ್ತೇ ಆಗದಂತೆ ಸಾವಿನ ಹಿಂದಿನ ಮನೆಯ ತನಕ ದೂಡಿಕೊಂಡು